


ಗ್ರಂಥಾಲಯದ ಪ್ರವೇಶ ದ್ವಾರ

# ಸಿಂಗಪುರದ ಲೈಬ್ರರಿ

ಮನುಷ್ಯನ ಬುದ್ಧಿ– ಭಾವಗಳ ಬೆಳವಣಿಗೆಯ ಇತಿಹಾಸವನ್ನು ಹೇಳುವ ಗ್ರಂಥಾಲಯಗಳು ಜ್ಞಾನದಾಹಿ ತಾಣಗಳು. ಜಗತ್ತಿನ ಎಲ್ಲಾ ಬಗೆಯ ಜ್ಞಾನ ಶಾಖೆಗೆ ಸಂಬಂಧಿಸಿದ ಪುಸ್ತಕವನ್ನು ತನ್ನ ಉದರದೊಳಗೆ ಸೇರಿಸಿಕೊಳ್ಳುವ ಗ್ರಂಥಾಲಯಗಳು ವಿಶ್ವರೂಪಿಯಾದರೂ ಅದರ ಸ್ವರೂಪ ಭಿನ್ನವಿರುತ್ತದೆ. ಗ್ರಂಥಾಲಯ ಶಾಸ್ತ್ರವನ್ನು ವೈಜ್ಞಾನಿಕ ಶಿಸ್ತಿನಲ್ಲಿ ಅಧ್ಯಯನ ಮಾಡಿದಂತೆ ಗ್ರಂಥಗಳ ವೈಜ್ಞಾನಿಕ ಜೋಡಣೆ ಹಾಗೂ ಓದುಗ ಸ್ನೇಹಿಯಾಗುವಲ್ಲಿ ಮಹತ್ವದ ಸುಧಾರಣೆಗಳಾಗಿವೆ. ಐಟಿ ಜಗತ್ತಿನಲ್ಲಿ ಅತಿ ಹೆಚ್ಚು ಪ್ರಸಿದ್ಧಿ ಪಡೆದಿರುವ ಸಿಂಗಪುರ ನಿರ್ಮಿಸಿರುವ ಈ ಓದುಗ ಸ್ನೇಹಿ ಗ್ರಂಥಾಲಯ ಸೋಜಿಗವನ್ನು ಉಂಟು ಮಾಡುವಂತಿದೆ.

ಸಿಂಗಪುರದ ಗ್ರಂಥಾಲಯದ ಇತಿಹಾಸ 1823ರಷ್ಟು ಹಳೆಯದು, ಆದರೆ ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ಆಧುನೀಕರಣಗೊಂಡಿದೆ. ಡಿಜಿಟಲ್ ಮಾಹಿತಿ ನೀಡುವಲ್ಲಿಯೂ ಅದು ಹಿಂದೆ ಬಿದ್ದಿಲ್ಲ. ಇಲ್ಲಿ ಗ್ರಂಥಾಲಯ ಸ್ಥಾಪಿಸುವ ಕನಸು ಕಂಡವರು ಸಿಂಗಪುರದ ಜನಕ ಸ್ಟ್ಯಾಂಫರ್ಡ್ ರ‍್ಯಾಫಲ್ಸ್. ಈತ ರ‍್ಯಾಫಲ್ಸ್ ಇನ್‌ಸ್ಟಿಟ್ಯೂಷನ್ ಎಂಬ ಮೊದಲ ಗ್ರಂಥಾಲಯದ ಸ್ಥಾಪನೆಗೆ ಕಾರಣರಾದರು. ನಂತರ 1927ರಲ್ಲಿ ಸಾರ್ವಜನಿಕ ಗ್ರಂಥಾಲಯ ಅಸ್ತಿತ್ವಕ್ಕೆ ಬಂತು. ಕ್ರಮೇಣ ಸಂಚಾರಿ ಲೈಬ್ರರಿಯೂ ಸೇರಿದಂತೆ ವಿವಿಧ ಬಗೆಯ ವಿಷಯವಾರು ಲೈಬ್ರರಿಗಳು ಜನ್ಮ ತಾಳಿದವು.

ಇಲ್ಲಿನ ಗ್ರಂಥಾಲಯಗಳ ಉಸ್ತುವಾರಿ ನೋಡಿಕೊಳ್ಳುವ ಸಂಬಂಧ 1995ರಲ್ಲಿ 'ನ್ಯಾಷನಲ್ ಲೈಬ್ರರಿ ಬೋರ್ಡ್' ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಇದು ಅಲ್ಲಿನ ಎಲ್ಲಾ ಗ್ರಂಥಾಲಯಗಳ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತದೆ. ಒಂದು ನ್ಯಾಷನಲ್ ಲೈಬ್ರರಿ, ಮೂರು ರೀಜನಲ್ ಲೈಬ್ರರಿ ಸೇರಿದಂತೆ, 20 ಕಮ್ಯುನಿಟಿ ಲೈಬ್ರರಿ, 15 ಕಮ್ಯುನಿಟಿ ಚಿಲ್ಡ್ರನ್ ಲೈಬ್ರರಿ ಹಾಗೂ ಸರ್ಕಾರದ ಏಜೆನ್ಸಿ, ಶಾಲಾ ಕಾಲೇಜುಗಳ ಗ್ರಂಥಾಲಯಗಳು ಇದರಡಿಯಲ್ಲಿವೆ.

ವಿಕ್ಟೋರಿಯಾ ಸ್ಟ್ರೀಟ್‌ನಲ್ಲಿರುವ ನ್ಯಾಷನಲ್ ಲೈಬ್ರರಿ 16 ಮಹಡಿಗಳ ಬೃಹತ್ ಕಟ್ಟಡ. ಗ್ರಂಥಾಲಯದ ಎಲ್ಲ ಮಹಡಿಗಳಿಗೂ ಎಸ್ಕಲೇಟರ್ ಹಾಗೂ ಲಿಫ್ಟ್ ವ್ಯವಸ್ಥೆ ಕಲ್ಪಿಸಲಾಗಿದೆ. 7ರಿಂದ 13ನೇ ಮಹಡಿಯವರೆಗೆ ಕೇವಲ ಪರಾಮರ್ಶನ ವಿಭಾಗಕ್ಕೆ ಮೀಸಲಿಟ್ಟಿದ್ದು ಇಲ್ಲಿನ ವಿಶೇಷ. ಇದು ಸಂಶೋಧಕರಿಗೆ ಹೆಚ್ಚು ಅನುಕೂಲವಾಗುವಂತೆ ರೂಪಿಸಲಾಗಿದೆ. 14– 16 ಮಹಡಿಗಳಲ್ಲಿ ಪ್ರದರ್ಶನಗಳನ್ನು ಏರ್ಪಡಿಸಲು ಅನುಕೂಲವಾಗುವಂತೆ ಕಟ್ಟಡ ವಿನ್ಯಾಸ ಮಾಡಲಾಗಿದೆ. ಹಾಗೂ ಒಂದು ಸೆಮಿನಾರ್ ಹಾಲ್ ನಿರ್ಮಿಸಲಾಗಿದೆ.

21 ಟೌನ್‌ಗಳನ್ನು ಒಳಗೊಂಡಿರುವ ಸಿಂಗಪುರದಲ್ಲಿ ಪ್ರತಿ ಟೌನ್‌ನಲ್ಲಿಯೂ ಒಂದೊಂದು ಕಮ್ಯೂನಿಟಿ ಲೈಬ್ರರಿಯನ್ನು ನಿರ್ಮಿಸಲಾಗಿದೆ. ಅಲ್ಲಿ ಎಲ್ಲರ ವಯೋಮಾನಕ್ಕೆ ಅನುಗುಣವಾಗಿ ಗ್ರಂಥಗಳ ವರ್ಗೀಕರಣ ಮಾಡಲಾಗಿದೆ. ಗ್ರಂಥಾಲಯಗಳು ಹೆಚ್ಚು ಸ್ನೇಹಮಯಿಗಳಾಗಿದ್ದು, ಓದುಗರ ಅನುಕೂಲದಂತೆ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೊಳಿಸಿವೆ. ಯಾವುದೇ ಲೈಬ್ರರಿಯ ಸದಸ್ಯತ್ವ ಪಡೆದರೆ ಸಿ.ಡಿ. ಸಹಿತ ಒಟ್ಟು ಎಂಟು ಪುಸ್ತಕಗಳನ್ನು ನೀಡಲಾಗುತ್ತದೆ. ಪ್ರತಿಯೊಂದಕ್ಕೂ 21 ದಿನಗಳ ಗಡುವು. ಅಷ್ಟಕ್ಕೂ ಪುಸ್ತಕ ಅಗತ್ಯವಿದ್ದರೆ, ಮತ್ತೆ 21 ದಿನಗಳವರೆಗೆ ನವೀಕರಿಸಿಕೊಳ್ಳಬಹುದು. ನಂತರ ಯಾವುದೇ ಕಾರಣಕ್ಕೂ ಮುಂದುವರಿಸುವಂತಿಲ್ಲ. ಮರಳಿಸುವ ಮೂರು ದಿನದ ಮೊದಲೇ ಮತ್ತೊಮ್ಮೆ ಗ್ರಂಥಾಲಯ ಅಧಿಕಾರಿಗಳು ಫೋನು ಮಾಡಿ ಸದಸ್ಯರಿಗೆ ನೆನಪಿಸುತ್ತಾರೆ.

ಇಲ್ಲಿಯ ಮತ್ತೊಂದು ವಿಶೇಷವೆಂದರೆ, ಯಾವುದೇ ಲೈಬ್ರರಿಯಿಂದ ತಂದ ಪುಸ್ತಕವನ್ನು ಮತ್ತಾವುದೋ ಲೈಬ್ರರಿಗೆ ಮರಳಿಸಬಹುದು. ಎಲ್ಲಾ ಲೈಬ್ರರಿಗಳಲ್ಲಿಯೂ ಅಗತ್ಯ ಮಾಹಿತಿಗಳ ನಕಲು ಪಡೆಯಲು ಜೆರಾಕ್ಸ್ ಸೆಂಟರ್ ತೆರೆಯಲಾಗಿದೆ. ಅತಿ ಕಡಿಮೆ ಬೆಲೆಯಲ್ಲಿ ಸ್ವತಃ ಓದುಗರೆ ಜೆರಾಕ್ಸ್ ಮಾಡಿಕೊಳ್ಳಬಹುದು, ಅಗತ್ಯವಿದ್ದರೆ ಮಾತ್ರ ಸಿಬ್ಬಂದಿಯ ಸಹಾಯ ಪಡೆಯಬಹುದು. ಹಳೆಯ ದಾಖಲೆಗಳನ್ನು ಮೈಕ್ರೊಫಿಲ್ಮ್‌ಗಳ ರೂಪದಲ್ಲಿ ಸಂಗ್ರಹಿಸಿ ಇಡುವ ವ್ಯವಸ್ಥೆಯಿದೆ. ಅದನ್ನು ಕಂಪ್ಯೂಟರ್‌ಗೆ ಅಳವಡಿಸಿ ನೋಡಬಹುದು. ಬೇಕಾದ ಭಾಗದ ಜೆರಾಕ್ಸ್ ಪ್ರತಿಯನ್ನೂ ಪಡೆಯಬಹುದು. ಓದುಗ ಸ್ನೇಹಿ ಸಿಂಗಪುರ ಗ್ರಂಥಾಲಯ ಆಧುನಿಕ ಗ್ರಂಥಾಲಕ್ಕೆ ಮಾದರಿಗಳಲ್ಲಿ ಒಂದು.

■ ಟಿ.ಗುರುರಾಜಾಚಾರ್



ಗ್ರಂಥಾಲಯದ ಹೊರ ನೋಟ